Date :13.03.2026

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ (ಮರು)ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಜಿ.ಸಿ. ವಕೀಲರಿಂದ –**

ದಿಃ 01.07.2019 ರಂದು ನನ್ನ ಸಹೋದರ ಮತ್ತು ಗ್ರಾಮಸ್ಥರು ಕೂಡಿ 1 ನೇ ಎದುರುದಾರರಿಗೆ ಮನವಿ ಪತ್ರ ಸಲ್ಲಿಸಿದ್ದು, ಅದರ ಪ್ರತಿ ಹಾಗೂ ದಿಃ 16.08.2019 ರ ದಿನಾಂಕದ ಒಂದು ಹಿಂಬರಹವನ್ನು 1 ನೇ ಎದುರುದಾರರು ನಮ್ಮ ಊರಿನ ಅನಂತಪ್ಪ ಎಂಬುವವರಿಗೆ ಕಳುಹಿಸಿದ್ದು, ಅದನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–57 ಮತ್ತು 58 ಎಂದು, ಹೊಳಲ್ಕೆರೆ ಉಪನೊಂದಣಾಧಿಕಾರಿ ತಮ್ಮ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮಾರ್ಗಸೂಚಿ ಮಾರುಕಟ್ಟೆಯ 2016–17 ಮತ್ತು 2017–18 ರ ದರಪಟ್ಟಿಯ ಪ್ರತಿ ನೀಡಿದ್ದು, ಅದರ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–59 ಮತ್ತು 60 ಎಂದು ಗುರುತಿಸಲಾಯಿತು.

**– ಪಾಟೀ ಸವಾಲು – ಎದುರುದಾರರ ಪರ ಶ್ರೀ ಜಿ.ಎಸ್.ಎ. ವಕೀಲರಿಂದ –**

ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.